**B**

**CCE RR/PR/ NSR/NSPR**
**Reduced Syllabus**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ,
ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

ಜೂನ್ 2024 ರ ಪರೀಕ್ಷೆ - 2

**JUNE 2024 EXAMINATION - 2**

# ಮಾದರಿ ಉತ್ತರಗಳು
# MODEL ANSWERS

ಸಂಕೇತ ಸಂಖ್ಯೆ : **33-K** CODE No. : **33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ
## Subject : Second Language — KANNADA

(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)

**(Regular Repeater / Private Repeater / NSR / NSPR)**

ದಿನಾಂಕ : 21. 06. 2024 ] [ ಗರಿಷ್ಠ ಅಂಕಗಳು : 80

**Date : 21. 06. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| I. | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | 4 × 1 = 4 |
| 1. | ದ್ವಿರುಕ್ತಿಗೆ ಉದಾಹರಣೆ<br>(ಎ) ಚಿಲಿಪಿಲಿ (ಬಿ) ನೋವು ನಲಿವು<br>(ಸಿ) ತಲೆದೂಗು (ಡಿ) ಹೊಚ್ಚ ಹೊಸದು<br>ಉತ್ತರ : (ಡಿ) ಹೊಚ್ಚ ಹೊಸದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಹೊಂಬಾಳೆ ಇದು<br>(ಎ) ತತ್ಪುರುಷ ಸಮಾಸ (ಬಿ) ಅಂಶಿ ಸಮಾಸ<br>(ಸಿ) ಕರ್ಮಧಾರಯ ಸಮಾಸ (ಡಿ) ದ್ವಿಗು ಸಮಾಸ<br>**ಉತ್ತರ :** (ಸಿ) ಕರ್ಮಧಾರಯ ಸಮಾಸ | |
| 3. | ಆಗಮ ಸಂಧಿಗೆ ಉದಾಹರಣೆಯಾದ ಪದ<br>(ಎ) ಒಂದೊಂದು (ಬಿ) ಕೈಯಲ್ಲಿ<br>(ಸಿ) ಕೊಳಲೂದಿ (ಡಿ) ಮೇಲೇಳು<br>**ಉತ್ತರ :** (ಬಿ) ಕೈಯಲ್ಲಿ | |
| 4. | ರುಚಿಯನ್ನು ಪದದಲ್ಲಿರುವ ವಿಭಕ್ತಿ<br>(ಎ) ದ್ವಿತೀಯಾ (ಬಿ) ಪಂಚಮೀ<br>(ಸಿ) ತೃತೀಯಾ (ಡಿ) ಸಪ್ತಮೀ<br>**ಉತ್ತರ :** (ಎ) ದ್ವಿತೀಯಾ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **12 × 1 = 12** |
| 5. | ದೇಶದ ಉದ್ಧಾರ ಯಾರ ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ ?<br>**ಉತ್ತರ :**<br>ದೇಶದ ಉದ್ಧಾರ ಸೈನಿಕ, ಸಾಹಿತಿ ಮತ್ತು ರೈತರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ. | |
| 6. | ಅಸಿ–ಮಸಿ ಎಂದರೇನು ?<br>**ಉತ್ತರ :**<br>ಅಸಿ ಎಂದರೆ ಯುದ್ಧ (ಸೈನಿಕ), ಮಸಿ ಎಂದರೆ ಸಾಹಿತ್ಯ ರಚನೆ. | |
| 7. | ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?<br>**ಉತ್ತರ :**<br>ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಹಕ್ಕಿಗೂಡಿನಲ್ಲಿ ಯಾವುದರ ಸಮನ್ವಯತೆ ಇದೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ಕಲಾವಿದನ ಸ್ವೋಪಜ್ಞತೆ ಮತ್ತು ವಿಜ್ಞಾನಿಯ ತಂತ್ರಜ್ಞಾನದ ಸಮನ್ವಯತೆ ಇದೆ. | |
| 9. | ಅಮೆರಿಕಾದಲ್ಲಿ ಗ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು ?<br>***ಉತ್ತರ :***<br>ಅಮೆರಿಕಾದಲ್ಲಿ ಗ್ಯಾನೆಟ್ ಎಂಬ ಕಡಲಹಕ್ಕಿ ಗಾಲ್ಫ್ ಚೆಂಡು, ನೀಲಿಸೀಸೆಯ ಚೂರು, ಈರುಳ್ಳಿ ಸಿಪ್ಪೆ ಮತ್ತು ಸಣ್ಣದೊಂದು ಬೊಂಬೆಯಿಂದ ತನ್ನ ಗೂಡನ್ನು ಅಲಂಕರಿಸಿತ್ತು. | |
| 10. | ಗೋಪಾಲನ ಬೆಳಗಿನ ಮುಖ್ಯ ಕೆಲಸ ಯಾವುದಾಗಿತ್ತು ?<br>***ಉತ್ತರ :***<br>ಬನಗಳಿಗೆ ಹೋಗಿ ಗೋಪಾಲನ ಪೂಜೆಗೆ ಬೇಕಾದ ಹೂವುಗಳನ್ನು ಕೊಯ್ದು ತರುವುದು ಗೋಪಾಲನ ಬೆಳಗಿನ ಮುಖ್ಯ ಕೆಲಸವಾಗಿತ್ತು. | |
| 11. | ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು ?<br>***ಉತ್ತರ :***<br>ಕಾಡನ್ನು ಅಲೆದ ಸಿದ್ಧಾರ್ಥನಿಗೆ ನಾಡಿನರ್ಥ ಹೊಳೆಯಿತು. | |
| 12. | ಕವಿ ಸಿ.ಪಿ.ಕೆ. ಅವರು ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಹೇಳಿದ್ದಾರೆ ?<br>***ಉತ್ತರ :***<br>ಕವಿ ಸಿ.ಪಿ.ಕೆ. ಅವರು ನಮ್ಮ ಕರ್ತವ್ಯಗಳನ್ನು ಅಹಂ ತೊರೆದು ಶಾಂತಿ ಸಹನೆ ಪ್ರೀತಿಗಳಿಂದ ಮೌನವಾಗಿ ಮಾಡಿ ಮುಗಿಸಬೇಕೆಂದು ಹೇಳಿದ್ದಾರೆ. | |
| 13. | ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ ?<br>***ಉತ್ತರ :***<br>ಜೀವನದಲ್ಲಿ ಇಟ್ಟುಕೊಂಡ ಹೆಗ್ಗುರಿಯ ಸಾಧನೆಗಾಗಿ ಹಗಲಿರುಳು ಹೋರಾಡಬೇಕು ಎಂದು ಅಡಿಗರು ಹೇಳಿದ್ದಾರೆ. | |
| 14. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 15. | ಕೌರವನ ಸೇನೆ ಉತ್ತರನಿಗೆ ಹೇಗೆ ಕಾಣಿಸಿತು ?<br>**ಉತ್ತರ :**<br>ಕೌರವನ ಸೇನೆ ಉತ್ತರನಿಗೆ ವಿಶಾಲವಾದ ಸಾಗರ (ಕಡಲು) ದಂತೆ ಕಾಣಿಸಿತು. | |
| 16. | ಧುರಕೆ ಬೆನ್ನುಹಾಕಿದರೆ ಏನು ಪ್ರಾಪ್ತಿಯಾಗುತ್ತದೆ ?<br>**ಉತ್ತರ :**<br>ಧುರಕೆ ಬೆನ್ನುಹಾಕಿದರೆ ಪಾಪ-ನರಕಗಳು ಪ್ರಾಪ್ತಿಯಾಗುತ್ತದೆ. | |
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?<br>**ಉತ್ತರ :**<br>ಉತ್ತಮ ಬೀಜಗಳ ಕೊರತೆ, ಭೂಮಿ ಬರಡಾಗುತ್ತಿರುವುದು ಕ್ರಿಮಿ-ಕೀಟಗಳ ಹಾವಳಿ, ಬೆಳೆಗೆ ವಿವಿಧ ರೀತಿಯ ರೋಗಗಳು, ಮಳೆಯ ಅಭಾವ, ಅತಿವೃಷ್ಟಿ ಇವಲ್ಲದೆ ತಾನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಇರುವುದು ಇವೆಲ್ಲವೂ ರೈತರು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. | |
| 18. | ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?<br>**ಉತ್ತರ :**<br>ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವುಗುಟುಕು ಪಡೆದು ಜೀವಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಎಲ್ಲ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಅಲ್ಲಿ ಕಾಣುತ್ತೇವೆ. | |
| 19. | ನೀಲಿ ಸಾಮ್ರಾಟ ಹಾಗೂ ಸಗ್ಗದ ಹಕ್ಕಿಗೂಡುಗಳ ವಿಶೇಷತೆಯನ್ನು ವಿವರಿಸಿ.<br>**ಉತ್ತರ :**<br>ನೀಲಿ ಸಾಮ್ರಾಟ ಮತ್ತು ಸಗ್ಗದಕ್ಕಿಗಳು ತಮ್ಮ ಗೂಡನ್ನು ಬಹು ಸುಂದರವಾಗಿ ಅಲಂಕರಿಸುತ್ತವೆ. ಕೇವಲ ಎರಡು ಒಣಕಡ್ಡಿಯನ್ನು ಅಪ್ಪಿ ಹಿಡಿದಂತೆ ಗುರುತ್ವಾಕರ್ಷಣೆ ಸಮತೋಲನವನ್ನು ಕಾಯ್ದಿಟ್ಟುಕೊಂಡು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಟ್ಟಲಾಕಾರದಲ್ಲಿ ಗೂಡು ನಿರ್ಮಿಸುತ್ತವೆ. ಹೊರಮೈಗೆ ಜೇಡರ ಮೊಟ್ಟೆ ಕೋಶಗಳನ್ನು ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತವೆ. ಶತ್ರುಗಳ ಕಣ್ಣಿಗೆ ಗೂಡು ಗೋಚರಿಸಬಾರದು ಎಂಬುದು ಇದರ ಉದ್ದೇಶವಾಗಿದೆ. | |
| 20. | ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತಿಗಳಿಂದ ಎಳಿಸಿದಳು ?<br>***ಉತ್ತರ :***<br>ಗೋಪಾಲ ಬೆಳಗಾಯ್ತು ಮೇಲೇಳು; ನೋಡಲ್ಲಿ, ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ತೊಳಗುತ್ತಿದ್ದಾನೆ. ಕೇಳಲ್ಲಿ, ಹಕ್ಕಿಗಳು ಹಾಡುತ್ತಾ, ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳ ಬನದಲ್ಲಿ ಅರಳಿ ನಿನಗಾಗಿ ಕಾದುಕೊಂಡಿವೆ. ಎದ್ದೇಳು ಗೋಪಾಲ, ಶಾಲೆಗೆ ಹೊತ್ತಾಗುತ್ತದೆ. ಗುರುಗಳೇನೆಂದಾರು ? ಏಳು ಗೋಪಾಲ. ನನ್ನ ಕಂದಾ ಎಂದು ತಾಯಿ ಗೋಪಾಲನನ್ನು ಎಳಿಸಿದಳು. | |
| 21. | ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು ?<br>***ಉತ್ತರ :***<br>ಕವಿ ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಪ್ರೀತಿಯ ಹೊಳೆ ಕೋಡಿಯಂತೆ ಹರಿಯಿತು ಎಂದು ಹೇಳಿದ್ದಾರೆ. ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ ಹೂವ ಬಿಟ್ಟು ನಗುವಂತೆ ಕಂಡಿತು. ಹಕ್ಕಿ ತನ್ನ ಮರಿಗೆ ಪ್ರೀತಿಯಿಂದ ಗುಟುಕು ಕೊಟ್ಟು ಹಾರಿತು. ಹುತ್ತಿನಿಂದ ಇರುವೆ ಗುಂಪು ಸಾಲುಗಟ್ಟಿ ನಡೆದವು. ಬೆಳ್ಳಕ್ಕಿಗಳು ಬಾನಿಗೆ ಏಣಿಹಾಕಿದಂತೆ ಸಂತಸದಿಂದ ಹಾರಿದವು. ಹಕ್ಕಿಗೂಡುಗಳಲ್ಲಿ ಹೊಸ ರಾಗ ಕೇಳಿಬಂತು. ಹೂವಿನ ಮಕರಂದ ಸವಿಯಲು ದುಂಬಿಗಳು ಸೇರಿದವು. ಮರಗಿಡಗಳು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಂಡವು. ಈ ರೀತಿಯಾಗಿ ಕಾಡು ತುಂಬ ಪ್ರೀತಿ ತುಂಬಿಕೊಂಡಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು ?<br>***ಉತ್ತರ :***<br>ಕುಣಿಗಲ್ ಕೆರೆಯು ಅಲ್ಲಿಯ ಜನರ ಉಪಕಸುಬಾದ ಮೀನುಗಾರಿಕೆಗೆ ಆಶ್ರಯ ತಾಣವಾಗಿದೆ. ಜನರು ಮೀನುಗಳನ್ನು ಹಿಡಿಯಲು ಕೆರೆಯಲ್ಲಿ ಬಲೆಗಳನ್ನು ಹಾಕುತ್ತಾರೆ. ಬಲೆಗಳನ್ನು ನೀರಿನಿಂದ ಮೇಲಕ್ಕೆ ಎತ್ತಿದಾಗ ಬಲೆಯಲ್ಲಿ ಸಿಲುಕಿಕೊಂಡ ಮೀನುಗಳು ನೆಗೆದಾಡುತ್ತವೆ. ಇದನ್ನು ಜನಪದರು ಬೊಬ್ಬೆ ಹೊಡೆದಾವೆ ಬಾಳೆ ಮೀನು ಎಂದು ವರ್ಣಿಸಿದ್ದಾರೆ. | |
| 23. | ವೈದ್ಯರು ಭೀಮನಾಯಕನ ಮಗುವಿನ ಪ್ರಾಣ ಉಳಿಸಿದ ಬಗೆಯನ್ನು ವಿವರಿಸಿ.<br>***ಉತ್ತರ :***<br>ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ಜ್ವರದ ತೀವ್ರತೆಯನ್ನು ಪರೀಕ್ಷಿಸಿದರು. ತಮ್ಮಲ್ಲಿದ್ದ ಔಷಧಿಯನ್ನು ಮಗುವಿಗೆ ಕುಡಿಸಿದರು. ಕತ್ತಲೆಯ ರಾತ್ರಿಯಲ್ಲಿ ಕಾಡಿನಲ್ಲಿ ಅಲೆದು ತಮಗೆ ಬೇಕಾದ ಸೊಪ್ಪನ್ನು ಹುಡುಕಿ ತಂದರು ಮತ್ತೊಮ್ಮೆ ಸೊಪ್ಪಿನ ರಸದೊಂದಿಗೆ ಔಷಧಿಯನ್ನು ಕುಡಿಸಿದರು. ತಮ್ಮ ಕುಪ್ಪಿಯಲ್ಲಿದ್ದ ಲೇಹವನ್ನು ಹಣೆಯ ತುಂಬ ಬಳಿದರು. ಕೋಳಿ ಕೂಗುವ ಹೊತ್ತಿಗೆ ಮಗು ನಿಚ್ಚಳವಾಗಿ ಕಣ್ಣು ತೆರೆದಿತ್ತು. ಮೈ ಬೆವರಿನಿಂದ ನೆನೆದಿತ್ತು. ಭೀಮನಾಯಕ ವೈದ್ಯರಿಗೆ ಕೃತಜ್ಞತೆಯನ್ನು ಹೇಳಿದನು. ಈ ರೀತಿಯಾಗಿ ವೈದ್ಯರು ಭೀಮನಾಯಕನ ಮಗನ ಪ್ರಾಣ ಉಳಿಸಿದರು. | |
| 24. | ಭೀಮನಾಯಕನು ವೈದ್ಯರ ವಸ್ತುಗಳನ್ನು ಏಕೆ ಹಿಂತಿರುಗಿಸಿದನು ಎಂಬುದನ್ನು ವಿವರಿಸಿ.<br>***ಉತ್ತರ :***<br>ವೈದ್ಯರು ನೀಡಿದ ಔಷಧೋಪಚಾರದಿಂದ ಭೀಮನಾಯಕನ ಮಗು ಬದುಕಿತು. ಇದರಿಂದ ಭೀಮನಾಯಕನಿಗೆ ಸಂತೋಷವಾಯಿತು. ಜೊತೆಗೆ ತಾನು ಮಾಡಿದ ತಪ್ಪಿನ ಅರಿವಾಯಿತು. ಇನ್ನು ಮುಂದೆ ಕಳ್ಳತನ ಮಾಡಬಾರದು ಎಂದು ತೀರ್ಮಾನಿಸಿ ವೈದ್ಯರ ಮನೆಯಿಂದ ಕದ್ದುಕೊಂಡು ಹೋಗಿದ್ದ ವಸ್ತುಗಳನ್ನು ಹಿಂತಿರುಗಿಸಿದನು. ಈ ಮೂಲಕ ತನ್ನ ಮಗುವನ್ನು ಬದುಕಿಸಿದ ವೈದ್ಯರಿಗೆ ಕೃತಜ್ಞತೆ ಸಲ್ಲಿಸಿದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | ಅ.ರಾ. ಮಿತ್ರ :<br>**ಉತ್ತರ :**<br>ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ. ಇವರು ೧೯೩೫ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು ಎಂಬ ಗ್ರಾಮದಲ್ಲಿ ಜನಿಸಿದರು. ಇವರು 'ಆರತಕ್ಷತೆ ಮತ್ತು ಇತರ ಪ್ರಬಂಧಗಳು', 'ನಾನೇಕೆ ಕೊರೆಯುತ್ತೇನೆ ಮತ್ತು ಇತರ ಪ್ರಬಂಧಗಳು', 'ಛಂದೋಮಿತ್ರ', 'ಕನ್ನಡ ಮೇಘದೂತ', 'ಮಹಾಭಾರತ ಪಾತ್ರ-ಸಂಗತಿಗಳು', 'ವಚನಕಾರರು ಮತ್ತು ಶಬ್ದಕಲ್ಪ', 'ಒಳನೋಟಗಳು', 'ಕವಿಗಳ ಬೆನ್ನೇರಿ', 'ಕೈಲಾಸಂ ಬದುಕು-ಬರಹ' ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಾವ್ಯಾನಂದ ಪುರಸ್ಕಾರ, ಗೊರೂರು ಸಾಹಿತ್ಯ ಹಾಗೂ ಧರ್ಮಶ್ರೀ ನಗೇರಾಜ ಪ್ರಶಸ್ತಿಗಳು ಸಂದಿವೆ. | |
| **V.** | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ವೇಷಧರಿಸಿ ಫಲವೇನಯ್ಯ<br>ವೇಷದಂತಾಚರಣೆ ಇಲ್ಲದನ್ನಕ್ಕ<br>ವೇದಾಂತವನೋದಿ ಫಲವೇನಯ್ಯ,<br>ಬ್ರಹ್ಮ ತಾನಾಗದನಕ್ಕ<br>ನಾನಾ ಕೆರೆಯ ತೋಡಿ ಫಲವೇನಯ್ಯ,<br>ಪುಣ್ಯತೀರ್ಥಗಳು ಬರದನ್ನಕ್ಕ ಕಪಿಲಸಿದ್ಧ ಮಲ್ಲಿಕಾರ್ಜುನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಉತ್ತರ :**<br>ಪದ್ಯಪಾಠ ವಚನಗಳು, ಇದರಲ್ಲಿಯ ಸಿದ್ಧರಾಮೇಶ್ವರರ ವಚನ ಇದಾಗಿದೆ. ಸಿದ್ಧರಾಮೇಶ್ವರರು ಈ ವಚನದ ಮೂಲಕ ಮನುಷ್ಯನ ನಡೆ-ನುಡಿಗಳು ಒಂದಾಗಿರಬೇಕು ಎಂಬುದನ್ನು ತಿಳಿಸಿದ್ದಾರೆ. ವೇಷಧರಿಸಿದ ಮೇಲೆ ವೇಷದಂತೆ ಆಚರಣೆಯೂ ಇರಬೇಕು. ವೇದಗಳನ್ನು ಅಧ್ಯಯನ ಮಾಡಿದ ಮೇಲೆ ಅದರಲ್ಲಿರುವ ಮೌಲ್ಯಗಳನ್ನು ತಿಳಿದು ಜೀವನದಲ್ಲಿ ಅಳವಡಿಸಿಕೊಂಡು ಜ್ಞಾನಿಯಾಗಬೇಕು. ಇಲ್ಲದಿದ್ದರೆ ಜೀವನ ವ್ಯರ್ಥವಾಗುತ್ತದೆ. ಹೇಗೆಂದರೆ ಉದಾಹರಣೆಗೆ ನೀರು ಬೇಕೆಂದು ಬಯಸಿ ಕೆರೆಗಳನ್ನು ತೋಡಿದರೆ ಕೆರೆಯಲ್ಲಿ ನೀರು ಬರದೆ ಇದ್ದರೆ ಕೆರೆಯನ್ನು ತೋಡಿದ್ದು ವ್ಯರ್ಥವೆನಿಸುತ್ತದೆ. ಆದ್ದರಿಂದ ನಡೆನುಡಿಗಳು ಒಂದಾಗಿರಬೇಕು. ಅಂದಾಗ ಜೀವನ ಸಾರ್ಥಕವಾಗುತ್ತದೆ ಎಂಬುದನ್ನು ಈ ವಚನ ಪ್ರತಿಪಾದಿಸುತ್ತದೆ. | |
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | ಹೂಬನ ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಮನೋಹರವಾಗಿತ್ತು.<br>**ಉತ್ತರ :**<br>ಅಲಂಕಾರದ ಹೆಸರು : ಉಪಮಾಲಂಕಾರ<br>ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>ಉಪಮೇಯ : ಹೂಬನ<br>ಉಪಮಾನ : ಮಳೆಬಿಲ್ಲು<br>ಉಪಮಾವಾಚಕ : ಅಂತೆ<br>ಸಮಾನಧರ್ಮ : ಮನೋಹರತೆ<br>ಸಮನ್ವಯ : ಇಲ್ಲಿ 'ಹೂಬನ' ಎಂಬ ಉಪಮೇಯವನ್ನು 'ಮಳೆಬಿಲ್ಲು' ಎಂಬ ಉಪಮಾನಕ್ಕೆ 'ಅಂತೆ' ಎಂಬ ಉಪಮಾವಾಚಕದ ಮೂಲಕ ಹೂಬನ ಹೊಂದಿರುವ ಮನೋಹರತೆಯನ್ನು ಸಮನ್ವಯಗೊಳಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ-ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | ಕೈಕೆಸರಾದರೆ ಬಾಯಿ ಮೊಸರು.<br>**ಅಥವಾ**<br>ಪೆನ್ನು ಖಡ್ಗಕ್ಕಿಂತ ಹರಿತ. | |
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **5 × 3 = 15** |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು-ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ಇಂಥಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?"<br>***ಉತ್ತರ :***<br>ಈ ವಾಕ್ಯವನ್ನು ಅ.ರಾ. ಮಿತ್ರರವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಕೃತಿಯಿಂದ ಆಯ್ದ 'ಒಣಮರದ ಗಿಳಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಇಂದ್ರನು ಗಿಳಿರಾಯನಿಗೆ ಕೇಳುತ್ತಾನೆ. ಕಾಡಿನಲ್ಲಿ ಹಸಿರಿನಿಂದ ಕಂಗೊಳಿಸುವ ಫಲಪುಷ್ಪ ಭಾರದಿಂದ ಬೀಗುವ ನೆರಳು ಕೊಡುವ ಮರಗಳಿದ್ದವು. ಇಂತಹ ಮರಗಳನ್ನು ಬಿಟ್ಟು ಗಿಳಿಯು ಒಣಮರದಲ್ಲಿ ವಾಸಮಾಡುತ್ತಿತ್ತು. ಇದನ್ನು ಇಂದ್ರನು ನೋಡಿ ಇಂಥ 'ಒಣ ಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ' ಎಂದು ಕೇಳಿದನು. ಗಿಳಿಯು ಆ ಮರವನ್ನು ಬಿಟ್ಟು ಹೋಗದಿರಲು ಕಾರಣವನ್ನು ತಿಳಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇಂದ್ರನು ಗಿಳಿರಾಯನ ತತ್ವನಿಷ್ಠೆ ಹಾಗೂ ಪರಹಿತಕಾಂಕ್ಷಿಯ ಗುಣವನ್ನು ಮೆಚ್ಚಿಕೊಂಡನು. ಗಿಳಿಗೆ ಬೇಕಾದ ವರವನ್ನು ನೀಡಿದನು. ಇಲ್ಲಿ ಗಿಳಿಯ ಹಾಗೂ ಇಂದ್ರನ ಸಂಭಾಷಣೆಯು ಸ್ವಾರಸ್ಯಕರವಾಗಿದೆ. | |
| 30. | ''ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ.''<br>*ಉತ್ತರ :*<br>ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಅವರು ಬರೆದಿರುವ 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಜೀವನಚರಿತ್ರೆಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಪುಟ್ಟಯ್ಯ ಸಿದ್ಧಮ್ಮ ತಾಯಿಗೆ ಹೇಳಿದ್ದಾರೆ. ಸಿದ್ಧಮ್ಮ ತಾಯಿ ಪುಟ್ಟಯ್ಯನನ್ನು ಮನೆಗೆ ಬರುವಂತೆ ಕೇಳಿಕೊಂಡಾಗ ಪುಟ್ಟಯ್ಯನ ಮನಸ್ಸು ದೃಢವಾಗಿತ್ತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಮನವರಿಕೆ ಮಾಡಿಕೊಟ್ಟರು. ''ನನಗೆ ನನ್ನ ಸರ್ವಸ್ವವೂ ಗುರುಗಳು, ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ ತಾಯಿ, ನೀನೆ ಹೇಳು ? ಭವದಲ್ಲಿಯ ಎಲ್ಲ ಬಂಧನಗಳನ್ನು ತೊಡೆದು ಹಾಕಿರುವೆ ಗುರು ಪಂಚಾಕ್ಷರರೇ ನನ್ನ ಸರ್ವಸ್ವ. ಅವರ ಆಜ್ಞಾಧಾರಕ ನಾನು. ನನ್ನ ಮಗನೆಂಬ ಭಾವವನ್ನು ತೊಡೆದುಹಾಕಿ ನನ್ನನ್ನು ಸಮಾಜಕ್ಕರ್ಪಿಸು'' ಎಂದು ಹೇಳುತ್ತಾರೆ. ಇಲ್ಲಿ ಪುಟ್ಟಯ್ಯನಿಗಿದ್ದ ಸಮಾಜ ಸೇವೆಯ ಮನೋಭಾವ ಸುಂದರವಾಗಿ ವ್ಯಕ್ತಗೊಂಡಿದೆ. | |
| 31. | ''ಆ ಗೋಪಾಲ ಕೊಡಬೇಕು, ನಾವು ಉಣಬೇಕು''<br>*ಉತ್ತರ :*<br>ಈ ವಾಕ್ಯವನ್ನು ಕುವೆಂಪುರವರ ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಗೋಪಾಲನ ತಾಯಿ ಗೋಪಾಲನಿಗೆ ಹೇಳುತ್ತಾಳೆ. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಬೈಗಿನ ಹೊತ್ತು ಕಾಡಿನ ದಾರಿಯಲ್ಲಿ ನನಗೆ ಹೆದರಿಕೆಯಾಗುತ್ತದೆ. ನೆರೆಯೂರಿಂದ ಬರುವ ಹುಡುಗರಿಗೆ ಜೊತೆಗೆ ಆಳುಗಳಿರುವರಮ್ಮ. ನನಗೆ ಮಾತ್ರ ಯಾರೂ ಇಲ್ಲ ಎಂದು ಹೇಳುತ್ತಾನೆ. ಆಗ ತಾಯಿ ಮಗೂ ಅವರೆಲ್ಲ ಶ್ರೀಮಂತರ ಮಕ್ಕಳು, ಬೇಕಾದಷ್ಟು ಹಣವಿದೆ. ನಮಗೆಲ್ಲಿ ಬರಬೇಕು ? ನೀನೆ ಬಲ್ಲೆ, ಹೊಟ್ಟೆಗೆ ಹಿಟ್ಟು ಸಿಕ್ಕುವುದೆ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿ ನಮ್ಮ ಸಂಸಾರ ಸಾಗಬೇಕು. ನೋಡು "ಆ ಗೋಪಾಲ ಕೊಡಬೇಕು, ನಾವು ಉಣಬೇಕು" ಎಂದು ಹೇಳುವಲ್ಲಿ ತಾಯಿಯ ನಿಷ್ಕಲ್ಮಶ ಮನಸ್ಸು, ದೈವದ ಮೇಲಿನ ಭಕ್ತಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ. | |
| 32. | "ಸಿಡುಕು ಮಿಡುಕನು ತೊರೆದು ಮೌನಿಯಾಗು."<br>*ಉತ್ತರ :*<br>ಈ ವಾಕ್ಯವನ್ನು ಸಿ.ಪಿ. ಕೃಷ್ಣಕುಮಾರ್ ಅವರು ರಚಿಸಿದ 'ಬೊಗಸೆ' ಕವನಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಕವಿಗಳು ಹೇಳಿದ್ದಾರೆ. ಮಾನವ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ತನ್ನದಾದ ಕರ್ತವ್ಯಗಳನ್ನು ಮೌನವಾಗಿ ಮಾಡಿ ಮುಗಿಸಬೇಕು. ಕೂಗಾಟ ಹಾರಾಟದಿಂದ ಯಾವ ಫಲವೂ ಇಲ್ಲ. ಹಸಿಸೌದೆ ಬಸುಗುಟ್ಟಿ ದನಿಯನ್ನು ಎತ್ತುತ್ತದೆ. ತನ್ನ ಕರ್ತವ್ಯವನ್ನು ಪೂರೈಸುವುದಿಲ್ಲ. ಮದ್ದು ಕಿಡಿಸೋಕಿದ ತಕ್ಷಣ ಸಿಡಿದು ಅಬ್ಬರಿಸಿ ನಾಶವಾಗುತ್ತದೆ. ಹೀಗಿರದೆ ಸೂರ್ಯ ಕಿರಣಗಳಿಗೆ ಕರಗುವ ಇಬ್ಬನಿಯಂತೆ ನಮ್ಮ ಕರ್ತವ್ಯಗಳನ್ನು ಮೌನದಲ್ಲಿ ಮಾಡಿ ಮುಗಿಸಬೇಕು. ಸಿಡುಕು ಮಿಡುಕನ್ನು ತೊರೆಯಬೇಕು ಎಂದು ಕವಿ ಸಂದೇಶ ನೀಡಿದ್ದಾರೆ. ಇಲ್ಲಿ ಸಾರ್ಥಕ ಜೀವನದ ಮೌಲ್ಯ ಅಭಿವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 33. | "ಎಮ್ಮರಮನೆಯ ನಾರಿಯರೆ ಸಾಕು."<br>*ಉತ್ತರ :*<br>ಈ ವಾಕ್ಯವನ್ನು ಕುಮಾರವ್ಯಾಸ ರಚಿಸಿದ 'ಕರ್ಣಾಟ ಭಾರತ ಕಥಾಮಂಜರಿ' ಅಥವಾ 'ಗದುಗಿನ ಭಾರತ' ಎಂಬ ಕೃತಿಯಿಂದ ಆಯ್ದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಉತ್ತರಕುಮಾರನು ಅರ್ಜುನನಿಗೆ ಹೇಳುತ್ತಾನೆ. ಜೀವಭಯದಿಂದ ಉತ್ತರಕುಮಾರ ಯುದ್ಧ ಮಾಡಲು ಒಪ್ಪದಿದ್ದಾಗ ಅರ್ಜುನನು ಉತ್ತರನಿಗೆ ಹಲವು ಆಮಿಷಗಳನ್ನು ಒಡ್ಡುತ್ತಾನೆ. ಅದಕ್ಕೆ ಉತ್ತರನು "ಧುರಕ್ಕೆ ಬೆನ್ನು ಹಾಕಿದ್ದರಿಂದ ಬರುವ ಪಾಪವನ್ನು ಭೂಸುರರಿಂದ ಅಶ್ವಮೇಧಯಾಗ ಮಾಡಿಸಿ ಕಳೆದುಕೊಳ್ಳುತ್ತೇನೆ. ನನಗೆ ಸುರರ ಸತಿಯರು ಬೇಕಿಲ್ಲ ನಮ್ಮ ಅರಮನೆಯ ನಾರಿಯರೇ ಸಾಕು. ನಮ್ಮ ಅರಸುತನವೇ ನಮಗೆ ಇಂದ್ರಪದವಿ ನನ್ನನ್ನು ಬಿಟ್ಟು ಬಿಡು" ಎಂದು ಹೇಳುತ್ತಾನೆ. ಇಲ್ಲಿ ಉತ್ತರಕುಮಾರನು ನಗೆಪಾಟಲಿಗೆ ಒಳಗಾಗುವ ಪ್ರಸಂಗ ಹಾಸ್ಯಮಯವಾಗಿ ಅಭಿವ್ಯಕ್ತಗೊಂಡಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 34. | ಏಕಾಂಗಿ ವೀರನಂತೆ ..........................................<br>..................................................................<br>..................................................................<br>.............................................. ಕತ್ತಲಲ್ಲಿ ನಡೆದನು.<br>**ಅಥವಾ**<br>ಕಾಡು ಕಾಡು ..................................................<br>..................................................................<br>..................................................................<br>.................................... ಮಹಾಬೆಳಕೊಂದು ಕಂಡಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಉತ್ತರ :**<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು | |
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಆದೇಶಿಸಿರುವುದನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.<br>**ಅಥವಾ**<br>ಗುರಿ ಪದ್ಯದ ಸಾರಾಂಶವನ್ನು ಸ್ವಾರಸ್ಯ ಪೂರ್ಣವಾಗಿ ನಿಮ್ಮ ಮಾತುಗಳಲ್ಲಿ ವರ್ಣಿಸಿ ಬರೆಯಿರಿ.<br>**ಉತ್ತರ :**<br>ಗೋಪಾಲಕೃಷ್ಣ ಅಡಿಗರು ಮಾನವನ ಜೀವನ ಸಾರ್ಥಕವಾಗಬೇಕಾದರೆ ಅವನ ಜೀವನಕ್ಕೆ ಒಂದು ಗುರಿ ಇರಬೇಕು ಎಂದು ಹೇಳುತ್ತಾರೆ. ಗುರಿಯು ಒಂದೇ ಆಗಿರಬೇಕು. ಒಂದು ಬಾಣಕ್ಕೆ ಗುರಿ ಒಂದೇ ಇರುವಂತೆ ಒಂದು ದೇಹದಲ್ಲಿ ಆತ್ಮ ಒಂದೇ ಇರುವಂತೆ ಜೀವನಕ್ಕೂ ಒಂದೇ ಗುರಿ ಇರಬೇಕೆಂದು ಹೇಳುತ್ತಾರೆ. ಬದುಕಿನಲ್ಲಿ ಒಂದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹೆಗ್ಗುರಿಯನ್ನು ಇಟ್ಟುಕೊಂಡು ಅದರ ಸಾಧನೆಗೆ ಹಗಲಿರುಳು ಶ್ರಮಿಸಬೇಕು. ಹೇಗೆಂದರೆ ಕಮಲವು ಕೆಸರೊಳಗೆ ಜನಿಸಿದ್ದರೂ ಕೆಳಗಿನ ಕೆಸರನ್ನು ನೋಡದೆ ಸ್ವಚ್ಛವಾದ ಬಾನಿನ ತಳವನ್ನು ನೋಡುತ್ತಾ ಸೂರ್ಯನ ಕಿರಣಗಳಿಗೆ ಅರಳಿ, ಮೆರೆದಾಡಿ. ವಿಜೃಂಭಿಸಿ ದೇವರ ಮುಡಿಯನ್ನು ಸೇರಿ ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತದೆ. ಅದೇ ರೀತಿ ಮಾನವನು ಅಚಲವಾದ ಹೆಗ್ಗುರಿಯನ್ನು ಹೊಂದಿ ಅದರ ಸಾಧನೆಗೆ ಹಗಲಿರುಳು ಶ್ರಮಿಸಬೇಕು. ಗುರಿ ಸಾಧನೆಯ ಪಥದಲ್ಲಿ ಯಾವುದೇ ಅಡ್ಡಿ-ಆತಂಕಗಳು ಬಂದರೆ ಅವುಗಳಿಗೆ ಹೆದರದೆ. ಧೃತಿಗೆಡದೆ ಅವುಗಳನ್ನು ಎದುರಿಸಿ ಮುನ್ನಡೆಯಬೇಕು. ಹಿಡಿದ ಒಳ್ಳೆಯ ದಾರಿಯಲ್ಲಿ ಕೊನೆಯವರೆಗೂ ಜೀವನವನ್ನು ನಡೆಸಬೇಕು ಎಂದು ಕವಿ ಆದೇಶಿಸಿದ್ದಾರೆ. ಅಲ್ಲದೆ ಇಟ್ಟುಕೊಂಡ ಗುರಿ ಸಾಧನೆಯಿಂದ ತನಗೂ, ತನ್ನ ಸಮಾಜಕ್ಕೂ, ದೇಶಕ್ಕೂ ಒಳ್ಳೆಯದನ್ನುಂಟು ಮಾಡುವಂತಿರಬೇಕು. ಯಾವುದೇ ಸ್ವಾರ್ಥವನ್ನು ಬಯಸದೇ ಪರಹಿತ ಕಾರ್ಯಮಾಡಬೇಕು. ಅದರಲ್ಲಿ ಸ್ವಾರ್ಥವನ್ನು ಬಯಸಿದರೆ ನಮಗೆ ಕೆಟ್ಟ ಹೆಸರು ಬರುತ್ತದೆ. ಭೂಮಿಯಲ್ಲಿ ಸ್ವರ್ಗವನ್ನು ಮಾನವರಲ್ಲಿ ದೇವರನ್ನು ಕಾಣುತ್ತಾ ಪರಹಿತ ಕಾರ್ಯವನ್ನು ಮಾಡುವುದೇ ಜೀವನದ ಗುರಿಯಾಗಬೇಕೆಂದು ಕವಿ ಆದೇಶಿಸಿದ್ದಾರೆ. | |
| | **ಅಥವಾ** | |
| | ಗೋಪಾಲಕೃಷ್ಣ ಅಡಿಗರು ಗುರಿ ಪದ್ಯದ ಮೂಲಕ ಮಾನವನ ಜೀವನದ ಸಾರ್ಥಕತೆಯನ್ನು ತಿಳಿಸಿದ್ದಾರೆ. ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು. ಸಿಲುಕಿದರೆ ನೆಲೆಯಿರದೆ ತೊಳಲಾಡಬೇಕಾಗುತ್ತದೆ. ಆದ್ದರಿಂದ ಮಾನವನ ಜೀವನಕ್ಕೆ ಒಂದು ನಿರ್ದಿಷ್ಟವಾದ ಗುರಿಯಿರಬೇಕು. ಕಮಲವು ಕೆಸರೊಳಗೆ ಹುಟ್ಟಿದ್ದರೂ ಕೆಸರನ್ನು ನೋಡದೆ ಸ್ವಚ್ಛವಾದ ಬಾನಿನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ತಳವನ್ನು ನೋಡುತ್ತಾ ಸೂರ್ಯನ ಕಿರಣಗಳಿಗೆ ಅರಳಿ, ಮೆರೆದಾಡಿ. ವಿಜೃಂಭಿಸಿ ದೇವರ ಮುಡಿಯನ್ನು ಸೇರಿ ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳುತ್ತದೆ. ಒಂದು ಬಾಣಕ್ಕೆ ಗುರಿಯು ಒಂದೇ ಆಗಿರುವಂತೆ, ಒಂದು ದೇಹದಲ್ಲಿ ಆತ್ಮ ಒಂದೇ ಇರುವಂತೆ ಜೀವನದಲ್ಲಿ ಒಂದೇ ಹೆಗ್ಗುರಿಯನ್ನು ಹೊಂದಿರಬೇಕು. ಅದನ್ನು ಸಾಧಿಸಲು ಹಗಲಿರುಳು ಹೋರಾಡಬೇಕು. ಏನಾದರೂ ಎಡರು-ತೊಡರುಗಳು ಬಂದರೆ ಅವುಗಳನ್ನು ಎದುರಿಸಿ ಮುನ್ನುಗ್ಗಬೇಕು. ಹೆದರದೆ ಧೃತಿಗೆಡದೆ ಪೌರುಷದಿಂದ ಹಿಡಿದ ಒಳ್ಳೆಯದಾರಿಯಲ್ಲಿ ಕೊನೆಯವರೆಗೂ ಜೀವನವನ್ನು ನಡೆಸಬೇಕು. ತಾನು ಸಾಧಿಸಲು ಹೊರಟ ಗುರಿಯಿಂದ ಸಮಾಜಕ್ಕೂ ದೇಶಕ್ಕೂ, ತನಗೂ ಒಳ್ಳೆಯದನ್ನುಂಟು ಮಾಡುವಂತಿರಬೇಕು. ಯಾವುದೇ ಫಲಾಪೇಕ್ಷೆ ಮಾಡಬಾರದು. ಇದು ಮಾನವ ಜೀವನದ ಗುರಿಯಾಗಬೇಕು. ಪರಹಿತದಲ್ಲಿ ಸ್ವಾರ್ಥವನ್ನು ಬಯಸಿದರೆ ಅದು ನಮಗೆ ಕೆಟ್ಟ ಹೆಸರನ್ನು ತರುತ್ತದೆ. ಈ ರೀತಿಯಾಗಿ ಜೀವನದಲ್ಲಿ ಗುರಿಯ ಮಹತ್ವವನ್ನು ಸ್ವಾರಸ್ಯಕರವಾಗಿ ತಿಳಿಸಿದ್ದಾರೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** **( 2 + 2 )** |
| 36. | ಹುಟ್ಟಿದವರೆಲ್ಲರಿಗೂ ಸಾಧಕರಾಗುವುದಕ್ಕೆ ಅವಕಾಶವಿದ್ದರೂ ಎಲ್ಲರೂ ಸಾಧಕರಾಗುವುದಿಲ್ಲ. ಸಾಧಕರಾಗುವುದಕ್ಕೆ ಅಪಾರವಾದ ಸಾಮಾಜಿಕ ಹೊಣೆಗಾರಿಕೆ, ಪರಿಶ್ರಮ, ಭವಿಷ್ಯತ್ ಚಿಂತನೆ, ಛಲವಂತಿಕೆ ಬೇಕಾಗುತ್ತದೆ. ಸಾಧನೆಯ ಪಥದಲ್ಲಿ ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಳ್ಳಬೇಕು. ಇಂತಹ ಅಪರೂಪದ ಸಾಧಕರನ್ನು ಸಮಾಜ ನಿತ್ಯ ಸ್ಮರಿಸುತ್ತದೆ. ಅಂತಹ ಸಾಧಕರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಬ್ಬರಾಗಿದ್ದಾರೆ. ಇವರ ಆಡಳಿತದ ಅವಧಿಯಲ್ಲಿ ಪ್ರಜಾ ಪ್ರತಿನಿಧಿ ಸಭೆಯು ನೂತನ ರೂಪವನ್ನು ಪಡೆದು ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. 1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿ. ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಹಾಗೂ ಕಾನೂನು ಜಾರಿಗೊಳಿಸುವ ಅಧಿಕಾರ ನೀಡಿದರು. ಇದರಿಂದ ಮೈಸೂರು ರಾಜ್ಯ ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಕಂಡಿತು. ಮಾದರಿ ಮೈಸೂರು ಎಂಬ ಬಿರುದಿಗೆ ಪಾತ್ರವಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ ಕನ್ನಡನಾಡಿನ ಅಭಿವೃದ್ಧಿಗೆ ಶ್ರಮಿಸಿದರು.<br><br>ಇವರ ಆಡಳಿತದ ಅವಧಿಯಲ್ಲಿ ಹೊಸ ರೈಲು ಮಾರ್ಗಗಳನ್ನು ಆರಂಭಿಸಿದರು. ಶಿವನ ಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ವಾಣಿವಿಲಾಸ ಸಾಗರ ಮತ್ತು ಕೃಷ್ಣರಾಜಸಾಗರ ಅಣೆಕಟ್ಟುಗಳನ್ನು ಕಟ್ಟಲಾಯಿತು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯ ಮಾಡಲಾಯಿತು. ಉನ್ನತ ಶಿಕ್ಷಣಕ್ಕಾಗಿ ಮೈಸೂರು ವಿಶ್ವವಿದ್ಯಾಲಯ ಸ್ಥಾಪಿಸಲಾಯಿತು. 270 ಉಚಿತ ಆಸ್ಪತ್ರೆಗಳನ್ನು ಪ್ರಾರಂಭಿಸಲಾಯಿತು. ಆರ್ಥಿಕ ಅಭಿವೃದ್ಧಿಯ ಸಂಕೇತವಾಗಿ ಮೈಸೂರು ಬ್ಯಾಂಕ್ ಹಾಗೂ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಯಿತು. ಇಷ್ಟೆಲ್ಲಾ ಕೊಡುಗೆಗಳನ್ನು ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರು ಜನತೆಗೆ ರಾಜರ್ಷಿಯಾಗಿ ನಾಡು ಕಂಡ ಧೀಮಂತ ನಾಯಕರಾಗಿ ಪರಿಣಮಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಪ್ರಶ್ನೆಗಳು :<br>ಅ) ಮೈಸೂರು ರಾಜ್ಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ನೀಡಿದ ಕೊಡುಗೆಗಳು ಯಾವುವು ?<br>ಆ) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ಮಾದರಿ ಆದದ್ದು ಹೇಗೆ ?<br>**ಉತ್ತರ :**<br>ಅ) ಹೊಸ ರೈಲು ಮಾರ್ಗಗಳು, ಶಿವನ ಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ, ವಾಣಿವಿಲಾಸ ಸಾಗರ ಮತ್ತು ಕೃಷ್ಣರಾಜಸಾಗರ ಅಣೆಕಟ್ಟುಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸಲಾಯಿತು. ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆ, 270 ಉಚಿತ ಆಸ್ಪತ್ರೆಗಳು, ಸಹಕಾರಿ ಸಂಘಗಳು ಮತ್ತು ಮೈಸೂರು ಬ್ಯಾಂಕ್ ಸ್ಥಾಪನೆ ಇವು ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆಗಳಾಗಿವೆ.<br>ಆ) ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತದ ಅವಧಿಯಲ್ಲಿ ಪ್ರಜಾ ಪ್ರತಿನಿಧಿ ಸಭೆಯು ನೂತನ ರೂಪವನ್ನು ಪಡೆದು ನಿಜವಾದ ಜನ ಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. 1907 ರಲ್ಲಿ ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿ. ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲ ವಿಷಯಗಳನ್ನು ವಿಮರ್ಶಿಸುವ ಹಾಗೂ ಕಾನೂನು ಜಾರಿಗೊಳಿಸುವ ಅಧಿಕಾರ ನೀಡಿದರು. ಇದರಿಂದ ಮೈಸೂರು ರಾಜ್ಯ ಭರತಖಂಡದಲ್ಲಿ ಯಾವ ಸಂಸ್ಥಾನವೂ ಕಾಣದ ಅಭಿವೃದ್ಧಿಯನ್ನು ಕಂಡು ಮಾದರಿ ಮೈಸೂರು ಎಂಬ ಬಿರುದಿಗೆ ಪಾತ್ರವಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **XII.** | **ಪ್ರಬಂಧ ಬರವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಪರಿಸರ ಸಂರಕ್ಷಣೆ ಇಂದಿನ ಅಗತ್ಯತೆ.<br>**ಅಥವಾ**<br>ಜ್ಞಾನಾಭಿವೃದ್ಧಿಯಲ್ಲಿ ವೃತ್ತಪತ್ರಿಕೆಗಳ ಪಾತ್ರ. | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಬಸವಕಲ್ಯಾಣದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ 'ಪಾಯಲ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಯೋಗ ದಿನಾಚರಣೆ' ಕಾರ್ಯಕ್ರಮ ಕುರಿತು ಬೀದರನಲ್ಲಿರುವ 'ಅಕ್ಷತಾ' ಎಂಬ ಗೆಳತಿಗೆ ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಧಾರವಾಡದ ಸಾಧನಕೇರಿ ಬಡಾವಣೆಯಲ್ಲಿ ವಾಸಿಸುತ್ತಿರುವ 'ಆಕಾಶ್' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ ಬೆಂಗಳೂರಿನ ಗ್ರಂಥಾಲಯ ಇಲಾಖೆಯ ನಿರ್ದೇಶಕರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>**ಉತ್ತರ :** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |